# ಪರ ಮೆರವಣಿಗೆ; ವಿರುದ್ಧ ಸಹಿ ಸಂಗ್ರಹ

## 20ಕ್ಕೂ ಹೆಚ್ಚು ನಾಗರಿಕ ಸಂಘಗಳು, ಕಾಲೇಜು ವಿದ್ಯಾರ್ಥಿಗಳಿಂದ ಉಕ್ಕಿನ ಸೇತುವೆ ಪರ ಮೆರವಣಿಗೆ | ಸರ್ಕಾರದ ನಿಲುವಿಗೆ ಬೆಂಬಲ


• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಸವೇಶ್ವರ ವೃತ್ತದಿಂದ ಹೆಬ್ಬಾಳದವರೆಗೆ ಉಕ್ಕಿನ ಸೇತುವೆ ನಿರ್ಮಾಣ ಯೋಜನೆಗೆ ಒಂದೆಡೆ ವಿರೋಧ ವ್ಯಕ್ತವಾಗುತ್ತಿದ್ದರೆ, ಮತ್ತೊಂದೆಡೆ ಉಕ್ಕಿನ ಸೇತುವೆ ಯೋಜನೆ ಜಾರಿಗೆ ಒತ್ತಾಯಿಸಿ ಸಾವಿರಾರು ಮಂದಿ ಸಂಘಟಿತರಾಗಿ ಆಗ್ರಹಿಸಿದ್ದು, ಸರ್ಕಾರ ಯಾವುದೇ ಕಾರಣಕ್ಕೂ ಯೋಜನೆ ಹಿಂಪಡೆಯಬಾರದು ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕ ಅಭಿವೃದ್ಧಿ ಮತ್ತು ಅನುಷ್ಠಾನ ಸಮಿತಿ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಸಂಘ-ಸಂಸ್ಥೆಗಳು, ಕಾಲೇಜುಗಳು ಸೇರಿ ಸಾವಿರಾರು ಮಂದಿ ಮೆರವಣಿಗೆ ನಡೆಸುವ ಮೂಲಕ ಸರ್ಕಾರದ ನಿರ್ಧಾರಕ್ಕೆ ಬೆಂಬಲ ಸೂಚಿಸಿದರು.

ಶಾಂತಿಯುತವಾಗಿ ನಡೆದ ಪ್ರದರ್ಶನದಲ್ಲಿ ಸಹಕಾರನಗರ, ಅಮೃತನಗರ, ಅಮೃತಹಳ್ಳಿ, ಕಾಫಿಬೋರ್ಡ್ ಬಡಾವಣೆ, ನ್ಯಾಯಾಂಗ ಬಡಾವಣೆ, ತಲಕಾವೇರಿ ಬಡಾವಣೆ, ಯಲಹಂಕ ನ್ಯೂ ಟೌನ್ ಸೇರಿದಂತೆ ಬೆಂಗಳೂರು ಉತ್ತರ ಭಾಗದ ಹಲವು ನಾಗರಿಕ ಕ್ಷೇಮಾಭಿವೃದ್ಧಿ ಸಂಘಗಳ ಸದಸ್ಯರು, ನಾಗರಿಕರು ಭಾಗವಹಿಸಿದ್ದರು. ಜತೆಗೆ ಕಾವೇರಿ ಪ್ರಥಮ ದರ್ಜೆ ಕಾಲೇಜು, ರೆಸಿಡೆನ್ಸಿ ಕಾಲೇಜು, ಸಿಂಧಿ ಕಾಲೇಜು, ಶೇಷಾದ್ರಿಪುರ ಕಾಲೇಜು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಕೂಡ ಪಾಲ್ಗೊಂಡು ಉಕ್ಕಿನ ಸೇತುವೆ ಯೋಜನೆ ಹಾಗೂ ಸಂಚಾರ ದಟ್ಟಣೆಯಿಂದ ಉಂಟಾಗುತ್ತಿರುವ ತೊಂದರೆಗಳ ಕುರಿತು ಅಭಿಪ್ರಾಯ ಹಂಚಿಕೊಂಡರು.

ಈ ವೇಳೆ ಮಾತನಾಡಿದ ಸಮಿತಿ ಅಧ್ಯಕ್ಷ ಬಿ.ಎಂ.ದೇವರಾಜಪ್ಪ, ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಸರ್ಕಾರ ಉಕ್ಕಿನ ಸೇತುವೆ ನಿರ್ಮಾಣಕ್ಕೆ ಮುಂದಾಗಿದ್ದು, ಇದಕ್ಕೆ ವಿರೋಧ ವ್ಯಕ್ತವಾಗಿದೆ. ಉಕ್ಕಿನ ಸೇತುವೆ ನಿರ್ಮಾಣವಾಗುವ ಪ್ರದೇಶಗಳ ಜನತೆ ಬೆಂಬಲ ಸರ್ಕಾರಕ್ಕಿದ್ದು, ಯಾವುದೇ ಒತ್ತಡಕ್ಕೆ ಮಣಿಯದೆ ಯೋಜನೆಯನ್ನು ಶೀಘ್ರ ಜಾರಿಗೊಳಿಸಬೇಕು. ಉಕ್ಕಿನ ಸೇತುವೆ ನಿರ್ಮಾಣದ ವೇಳೆ ಕಡಿಯುವ ಮರಗಳ ಬದಲಿಗೆ ನಗರದ ಇತರೆಡೆ 60 ಸಾವಿರ ಗಿಡಗಳನ್ನು ನೆಡುವ ಬಿಡಿಎ, ಅವು ದೊಡ್ಡವಾಗುವವರೆಗೂ ಅವುಗಳ ನಿರ್ವಹಣೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು.




KP

ಶನಿವಾರ ಹೆಬ್ಬಾಳದ ಎಸ್ಟೀಮ್ ಮಾಲ್ ಎದುರು ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು ಉಕ್ಕಿನ ಸೇತುವೆ ಯೋಜನೆಗೆ ಬೆಂಬಲ ಪ್ರದರ್ಶಿಸಿದರು.

**ಸರ್ಕಾರ ಮಾಡುವ ಒಳ್ಳೆ ಕೆಲಸಗಳಿಗೆ ಅಡ್ಡಿ, ಟೀಕೆಗಳು ಸಾಮಾನ್ಯ. ಅದನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದು ಸರಿಯಲ್ಲ. ಈ ಮಾರ್ಗದಲ್ಲಿ ಸೇತುವೆ ನಿರ್ಮಾಣದ ಅಗತ್ಯವಿದ್ದು, ಸಾರ್ವಜನಿಕರ ಉಪಯೋಗಕ್ಕಾಗಿ ಸರ್ಕಾರ ಯೋಜನೆ ಕೈಗೆತ್ತಿಕೊಂಡಿದೆ**

• **ಡಿ ಕೆ ಶಿವಕುಮಾರ್** ಇಂಧನ ಸಚಿವ

**ಉಕ್ಕಿನ ಸೇತುವೆ ನಿರ್ಮಾಣದಿಂದ ಬಳ್ಳಾರಿ ರಸ್ತೆಯಲ್ಲಿ ದಟ್ಟಣೆ ಕಡಿಮೆಯಾಗಲಿದೆ. ನಾವು ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಉಕ್ಕಿನ ಸೇತುವೆ ಬೇಕೆನ್ನುತ್ತಿದ್ದೇವೆ**

• **ಎಚ್ ಎಂ ವೆಂಕಟೇಶ್**
ನ್ಯಾಯಾಂಗ ಬಡಾವಣೆ ನಿವಾಸಿ

**ಉಕ್ಕಿನ ಸೇತುವೆ ನಿರ್ಮಾಣಕ್ಕಾಗಿ ಹೆಚ್ಚಿನ ಭೂ ಸ್ವಾಧೀನ ಅಗತ್ಯವಿಲ್ಲ. ಹಾಲಿ ರಸ್ತೆ ಮಧ್ಯ ಭಾಗದಲ್ಲಿ ಸೇತುವೆ ನಿರ್ಮಾಣವಾಗುವುದರಿಂದ ಹೆಚ್ಚಿನ ಮರಗಳಿಗೆ ಹಾನಿಯಾಗುವುದಿಲ್ಲ. ಉಕ್ಕಿನ ಸೇತುವೆಯಿಂದ ಅನನುಕೂಲಕ್ಕಿಂತ ಅನುಕೂಲಗಳೇ ಹೆಚ್ಚು**

• **ಸಂತೋಷ್** ಬೆಂಗಳೂರು
ಉತ್ತರ ಯುವ ಅಸೋಸಿಯೇಷನ್ ಸದಸ್ಯ

**ಬಳ್ಳಾರಿ ರಸ್ತೆಯಲ್ಲಿ ನಿತ್ಯ ತೀವ್ರ ಸಂಚಾರ ದಟ್ಟಣೆ ಉಂಟಾಗಿ, ಆ್ಯಂಬುಲೆನ್ಸ್‌ಗಳು ನಿಗದಿತ ಸಮಯಕ್ಕೆ ಆಸ್ಪತ್ರೆ ತಲುಪಲಾಗದೆ ರೋಗಿಗಳಿಗೂ ತೊಂದರೆಯಾಗುತ್ತದೆ. ಈ ನಿಟ್ಟಿನಲ್ಲಿ ಉಕ್ಕಿನ ಸೇತುವೆ ಅನಿವಾರ್ಯ. ಇದರಿಂದ ಈ ಭಾಗದಲ್ಲಿ ಮಾಲಿನ್ಯ ಕಡಿಮೆಯಾಗಲಿದೆ**

• **ಕಾವೇರಿ** ಕಾಲೇಜು ವಿದ್ಯಾರ್ಥಿ

**ನಿತ್ಯ 2.5 ಲಕ್ಷಕ್ಕೂ ಹೆಚ್ಚು ವಾಹನಗಳು ಈ ಮಾರ್ಗದಲ್ಲಿ ಸಂಚರಿಸುತ್ತಿರುವುದರಿಂದ ದಿನದ ಪ್ರಮುಖ ಅವಧಿಯಲ್ಲಿ ವಾಹನಗಳು ಗಂಟೆಗೆ ಕೇವಲ 10-15 ಕಿ.ಮೀ ವೇಗದಲ್ಲಿ ಸಂಚರಿಸುತ್ತವೆ. ಇದರಿಂದ ಲಕ್ಷಾಂತರ ಲೀಟರ್ ಇಂಧನ ವ್ಯರ್ಥವಾಗುತ್ತಿದೆ**

• **ಎ ಶಿವರಾಜಮೂರ್ತಿ** ಸಹಕಾರನಗರ
ನಾಗರಿಕ ಕ್ಷೇಮಾಭಿವೃದ್ಧಿ ಸಂಘದ
ಪ್ರಧಾನ ಕಾರ್ಯದರ್ಶಿ

**ಬಸವೇಶ್ವರ ವೃತ್ತದಿಂದ ಹೆಬ್ಬಾಳ ಜಂಕ್ಷನ್, ಮೇಖ್ರಿ ವೃತ್ತ, ಬಿಡಿಎ ಜಂಕ್ಷನ್‌ಗಳಲ್ಲಿ ಇಡೀ ದಿನ ಸಂಚಾರ ದಟ್ಟಣೆ ಇರುತ್ತದೆ. ದಟ್ಟಣೆ ನಿಯಂತ್ರಣಕ್ಕೆ ಉಕ್ಕಿನ ಸೇತುವೆ ನಿರ್ಮಿಸುತ್ತಿರುವುದು ಅಭಿನಂದನೀಯ**

• **ಬಾಲರಾಜ್** ಸಹಕಾರನಗರ ನಿವಾಸಿಗಳ
ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ

### ಸಮಗ್ರ ಮಾಹಿತಿ ನೀಡಲು ವಾರ ಗಡುವು

**ಬೆಂಗಳೂರು:** ಉಕ್ಕಿನ ಸೇತುವೆ ನಿರ್ಮಾಣ ಯೋಜನೆ ಕುರಿತ ನಿರ್ದಿಷ್ಟ ಮಾಹಿತಿಯನ್ನು ಟೆಂಡರ್ ಪಡೆದ ಎಲ್ ಆ್ಯಂಡ್ ಟಿ ಕಂಪನಿ ಹಾಗೂ ಸೇತುವೆಯ ರೂಪುರೇಷೆ ಸಿದ್ಧಪಡಿಸಿರುವ ಸ್ಟೂಪ್ ಕನ್‌ಸಲ್ಟೆನ್ಸಿಯಿಂದ ಕೋರಲಾಗಿದ್ದು, ವಾರದೊಳಗೆ ಮಾಹಿತಿ ನೀಡದಿದ್ದಲ್ಲಿ ಎಸಿಬಿ ಸ್ವಯಂ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದು ನಿವೃತ್ತ ಐಎಎಸ್ ಅಧಿಕಾರಿ ಎಂ.ಎನ್. ವಿಜಯಕುಮಾರ್ ಒತ್ತಾಯಿಸಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಯೋಜನೆ ಹಣ ಲೂಟಿಗಾಗೇ ನಡೆಯುತ್ತಿದೆ ಎಂಬ ಅಭಿಪ್ರಾಯ ವ್ಯಾಪಕವಾಗಿದ್ದು, ಈ ಬಗೆಗಿನ ಗೊಂದಲ ನಿವಾರಿಸಲು ಸಂಸ್ಥೆಗಳು ಸ್ಪಷ್ಟನೆ ನೀಡಬೇಕು. ಯೋಜನೆ ಬಗ್ಗೆ ಬಿಡಿಎ ತಿಳಿಸಿರುವ ಮಾಹಿತಿ ಹಾಗೂ ಡಿಆರ್‌ಪಿನಲ್ಲಿರುವ ಕೆಲವು ಅಂಶಗಳು ತದ್ವಿರುದ್ಧವಾಗಿವೆ. ಯೋಜನೆಯಲ್ಲಿ ಪಾರದರ್ಶಕತೆ ಕಾಪಾಡುವ ನಿಟ್ಟಿನಲ್ಲಿ ಕಂಪನಿಗಳು ಸೇರಿದಂತೆ ಮುಖ್ಯಮಂತ್ರಿ, ನಗರಾಭಿವೃದ್ಧಿ ಸಚಿವರು, ಹಿರಿಯ ಐಎಎಸ್ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು ಎಂದರು. ಕೇಂದ್ರ ಜಾಗೃತ ಆಯೋಗದ ಸೆ.23ರ ಸುತ್ತೋಲೆ ಪ್ರಕಾರ ಸ್ಟೂಪ್ ಕನ್ಸಲ್ಟೆನ್ಸಿ ಹಾಗೂ ಎಲ್ ಆ್ಯಂಡ್ ಟಿ ಕಂಪನಿಗಳು ತಮ್ಮ ವೆಬ್‌ಸೈಟ್‌ನಲ್ಲಿ ಮಾಹಿತಿ ಪ್ರಕಟಿಸಬೇಕು. ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಅ.28ರೊಳಗೆ ಮಾಹಿತಿ ನೀಡದಿದ್ದರೆ ಈ ಪತ್ರವನ್ನೇ ದೂರೆಂದು ಪರಿಗಣಿಸಿ ಎಸಿಬಿ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.